

ಬಹುರಾಷ್ಟ್ರೀಯಗೊಳಿಸಲು ಪ್ರಯತ್ನಿಸಿದೆ.

‘ಆದ್ರೂ ಸಾ.. ಅದಕ್ಕೆ ಸರಿಯಾದ ಕಾರಣ ಬೇಕಲ್ಲ...?’

‘ಕಾರಣವನ್ನು ಸಾರ್ವಜನಿಕವಾಗಿಯೇ ಹೇಳಿದ್ದಾರಲ್ಲಪ್ಪ...’

‘ಅದೇ ಸಾ..., ಮೂರು ವರ್ಷದಲ್ಲಿ ಏನನ್ನೂ ಸರಿಯಾಗಿ ಮಾಡಿಕೊಳ್ಳಲು ಆಗುವುದಿಲ್ಲ ಅಂತ ಕಾರಣ ಹೇಳಿದ್ದಾರೆ.!’

‘ಹಾಗೆಲ್ಲ ಅಪಾರ್ಥ ಬರುವಂತೆ ಮಾತನಾಡಬೇಡ ಯಂಕ್ಟೇಶ... ಮೂರು ವರ್ಷದಲ್ಲಿ ಯಾವ ಕೆಲಸವನ್ನೂ ಸರಿಯಾಗಿ ಮಾಡಲು ಆಗುವುದಿಲ್ಲ ಎಂದು ಅವರು ಹೇಳಿದ್ದು..’ ಎಂದು ತಿದ್ದಿದೆ.

‘ನಾನೂ ಅದನ್ನೇ ಹೇಳಿದ್ದು. ಮೂರು ವರ್ಷದಲ್ಲಿ ಸರಿಯಾಗಿ ಕೆಲಸ ಮಾಡಲು ಆಗದವರು ಐದು ವರ್ಷದಲ್ಲಿ ಮಾಡಿಯಾರೆ?’ ಯಂಕ್ಟೇಶ ಇನ್ನೊಂದು ಗೂಗ್ಲಿ ಒಗೆದ.

‘ಏನೋಪ್ಪ, ನಿನ್ನ ಜತೆ ವಾದ ಮಾಡಿ ಗೆಲ್ಲಲು ಆಗಲ್ಲ ಕಣಪ್ಪಾ. ಕಸಾಪ ಕಚೇರಿ ಕಡೆಗೆ ಹೋದ್ರೆ ಸರಿಯಾಗಿ ವಿಚಾರಿಸಿ ಹೇಳ್ತೀನಿ’ ಎಂದು ಸಮಾಧಾನಿಸಿದೆ.

‘ಸಾ... ಕೋಟದಲ್ಲಿ ಶಿವರಾಮ ಕಾರಂತರೇನಾದರೂ ಈಗ ಇದ್ದಿದ್ದರೆ ಅಲ್ಲಿಗೆ ಹೋದ ಇವ್ರನ್ನೆಲ್ಲ ಚೆನ್ನಾಗಿ ಬೈದು ವಾಪಸ್ ಓಡಿಸಿ ಬಿಟ್ಟಿರೋರು..’ ಎಂದ ಯಂಕ್ಟ.

‘ಅವರಿಲ್ಲ ಅನ್ನೋದನ್ನು ಕನ್ಫರ್ಮ್ ಮಾಡಿಕೊಂಡೇ ಇವರೆಲ್ಲ ಅಲ್ಲಿಗೆ ಹೋಗಿರೋದು ಕಣಪ್ಪಾ..!’

‘ಆದ್ರೂ ಇದು ಸರಿಯಲ್ಲ ಸಾ..! ಸಭೇನ ಬೆಂಗಳೂರಲ್ಲೇ